ಇ) ಉಚಿತ ವಿತರಣೆಯ ಎಲ್ಲಾ ಪಠ್ಯ ಪುಸ್ತಕಗಳು ಈಗಾಗಲೇ ಮುದ್ರಣವಾಗಿ ಎಲ್ಲಾ ಜಿಲ್ಲೆಗಳಿಗೂ ಸರಬರಾಜಾಗಿದೆ.

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಶವಗಳ ಮಾರಾಟ

4574 (4827) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ Post Mortem ಗಾಗಿ ಪ್ರತಿ ದಿವಸ ಬರುವ ಶವಗಳ ಸಂಖ್ಯೆ ಎಷ್ಟು;

ಆ) ಕಳೆದ ಒಂದು ವರ್ಷದಲ್ಲಿ ಶವಗಾರಕ್ಕೆ Post Martum ಗಾಗಿ ತರಲ್ಪಡುವ ಶವಗಳ ಪೈಕಿ ವಾರಸುದಾರರಿಲ್ಲದ ಅನಾಥ ಶವಗಳ ಸಂಖ್ಯೆ ಎಷ್ಟು;

ಇ) ಇತ್ತೀಚೆಗೆ ಶವಗಳನ್ನು ಮಾರಾಟ ಮಾಡುತ್ತಿದ್ದವರನ್ನು ಪೊಲೀಸರು ತನಿಖೆ–ಗೊಳಪಡಿಸಿದಾಗ ಈ ವ್ಯವಹಾರದಲ್ಲಿ ತೊಡಗಿರುವವರನ್ನು ಶಿಕ್ಷೆಗೊಳಪಡಿಸುವ ಬಗ್ಗೆ ಸರ್ಕಾರದ ಕ್ರಮಗಳೇನು;

ಈ) ಶವಗಳ ಲೆಕ್ಕ ನಿರ್ವಹಣೆ ಸಮರ್ಪಕವಾಗಿಸಲು ಅಗತ್ಯವಾಗಿ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಡಾ. ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಸರಾಸರಿ ದಿನಕ್ಕೆ 3.

ಆ) 2002 ರಲ್ಲಿ – 93.

2003 ರಲ್ಲಿ ಇದುವರೆಗೆ–64.

ಇ) ಈ ಬಗ್ಗೆ ಪೊಲೀಸರು ಕ್ರಿಮಿನಲ್ ಕೇಸು ದಾಖಲಿಸಿರುತ್ತಾರೆ. ಪ್ರಕರಣ ವಿಚಾರಣೆ ಹಂತದಲ್ಲಿದೆ.

ಈ) ಪ್ರತಿದಿನ ಶವಗಾರಕ್ಕೆ ಬರುವ ಮತ್ತು ಹೊರಕ್ಕೆ ಹೋಗುವ ಶವಗಳನ್ನು ದಾಖಲಿಸಲು ಪ್ರತ್ಯೇಕವಾಗಿ ರಿಜಿಸ್ಟರನ್ನು ನಿರ್ವಹಿಸಲಾಗುತ್ತಿದೆ. ಈ ರಿಜಿಸ್ಟರನ್ನು ಪ್ರತಿದಿನವು ಪರೀಕ್ಷಿಸಿ, ದಾಸ್ತಾನಿನಲ್ಲಿರುವ ಶವಗಳನ್ನು ಪರೀಕ್ಷಿಸಿ ಶವಗಳನ್ನು ಪಡೆದವರ ವಿಳಾಸ, ಹೆಸರು ಮತ್ತು ಸಹಿ ಪಡೆಯಲಾಗುತ್ತದೆ. ಅನಾಥ ಶವಗಳನ್ನು ಪೊಲೀಸ್‌ನವರಿಗೆ ಅಥವಾ ಕಾಲೇಜಿಗೆ ನೀಡಿದಾಗ ಸಂಬಂಧಪಟ್ಟವರ ಸಹಿ ಪಡೆಯಲಾಗುತ್ತದೆ. ಶವಗಾರ ನಿರ್ವಹಣೆಯನ್ನು ಮತ್ತು ಮೇಲ್ವಿಚಾರಣೆಯನ್ನು ಬಿಗಿಗೊಳಿಸಲಾಗಿದೆ.

ಪಿ.ಎಂ.ಜಿ.ಎಸ್.ವೈ. ಯೋಜನೆ ಪ್ರಗತಿ

4576 (4085) : ಶ್ರೀ ಶಿವಶಂಕರ ರೆಡ್ಡಿ (ಗೌರಿಬಿದನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಕಳೆದ ಎರಡು ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಜಿಲ್ಲಾವಾರು ಕಾಮಗಾರಿಗಳು ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಕಾರ್ಯಗತಗೊಂಡಿವೆ; ವಿವರ ನೀಡುವುದು;

2) ಈ ಕಾಮಗಾರಿಯು ಪೂರ್ಣಕೆಗೆ ಬಿಡುಗಡೆಯಾಗಿರುವ ಹಣವೆಷ್ಟು;

3) ಈ ವರ್ಷ ಎಷ್ಟು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಇದಕ್ಕೆ ಬಿಡುಗಡೆ ಮಾಡಲಾದ ಅನುದಾನವೆಷ್ಟು?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಕಳೆದ ಎರಡು ವರ್ಷಗಳಲ್ಲಿ ಪಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ ಒಟ್ಟು 1310 ಕಾಮಗಾರಿಗಳು ಮಂಜೂರಾಗಿದ್ದು ಇದರಲ್ಲಿ 587 ಕಾಮಗಾರಿಗಳು ಪೂರ್ಣ ಗೊಂಡಿದ್ದು ಉಳಿದ 823 ಕಾಮಗಾರಿಗಳು ಪ್ರಗತಿ ಯಲ್ಲಿರುತ್ತದೆ. ಜಿಲ್ಲಾವಾರು ಕಾಮಗಾರಿಗಳ ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

2) ಸದರಿ ಕಾಮಗಾರಿಗಳ ಪೂರ್ಯೆಕೆಗಾಗಿ ಬಿಡುಗಡೆಯಾಗಿರುವ ಒಟ್ಟು ಹಣ ರೂ. 30668 ಲಕ್ಷಗಳು.

3) ಈ ಸಾಲಿನಲ್ಲಿ 381 ಕಾಮಗಾರಿಗಳನ್ನು ರೂ. 11900 ಲಕ್ಷಗಳ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅನುಮೋದನೆಯಾದ ನಂತರ ಅನುದಾನ ಬಿಡುಗಡೆಯಾಗುವುದು.

ಅನುಬಂಧ–1

ಕ್ರಮ ಸಂಖ್ಯೆ	ಜಿಲ್ಲೆ ಹೆಸರು	ಕಾಮಗಾರಿಗಳ ಸಂಖ್ಯೆ	ರಸ್ತೆಯ ಉದ್ದ (ಕಿ.ಮೀ. ಗಳಲ್ಲಿ)	ಕಾಮಗಾರಿ ಹಂತ	
				ಪೂರ್ಣ ಗೊಂಡಿರುವುದು	ಪ್ರಗತಿ
1	ಬಾಗಲಕೋಟೆ	54	160.99	34	20
2	ಬೆಂಗಳೂರು (ಗ್ರಾ)	81	196.53	11	70
3	ಬೆಂಗಳೂರು (ನಗರ)	18	53.13	5	13
4	ಬೆಳಗಾಂ	65	331.26	23	42
5	ಬಳ್ಳಾರಿ	38	166.52	20	18
6	ಬೀದರ್	27	122.65	11	16
7	ಬಿಜಾಪುರ	33	122.99	16	17
8	ಚಾಮರಾಜನಗರ	21	81.79	8	13
9	ಚಿಕ್ಕಮಗಳೂರು	60	159.05	22	38
10	ಚಿತ್ರದುರ್ಗ	56	161.14	15	41
11	ದಕ್ಷಿಣ ಕನ್ನಡ	70	91.72	50	20
12	ದಾವಣಗೆರೆ	68	151.14	28	44
13	ಧಾರವಾಡ	22	100.25	7	15
14	ಗದಗ	24	110.90	12	12
15	ಗುಲ್ಬರ್ಗ	48	252.35	24	24

1	2	3	4	5	6
16	ಹಾಸನ	107	216.79	57	50
17	ಹಾವೇರಿ	46	193.15	16	30
18	ಕೊಡಗು	27	59.98	14	13
19	ಕೋಲಾರ	70	266.37	27	43
20	ಕೊಪ್ಪಳ	35	105.09	17	18
21	ಮಂಡ್ಯ	37	156.27	14	23
22	ಮೈಸೂರು	41	165.72	22	19
23	ರಾಯಚೂರು	49	139.13	27	22
24	ಶಿವಮೊಗ್ಗ	68	188.14	24	44
25	ತುಮಕೂರು	61	261.29	25	36
26	ಉಡುಪಿ	28	61.57	20	–
27	ಉತ್ತರ ಕನ್ನಡ	56	212.42	38	18
	ಒಟ್ಟು	1310	429820	587	823

ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಆಶ್ರಯ ಯೋಜನೆಗೆ ಸಹಾಯಧನ ಹೆಚ್ಚಳ

4577 (5312) : ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಆಶ್ರಯ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಿಸಲು ಕೊಡುತ್ತಿರುವ 20 ಸಾವಿರ ರೂಪಾಯಿಗಳು ಕಡಿಮೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮೇಲ್ಕಂಡ ಮೊತ್ತವನ್ನು 30 ಸಾವಿರಕ್ಕೆ ಹೆಚ್ಚಿಗೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಇ) ಹಾಗಿದ್ದಲ್ಲಿ, ಯಾವಾಗ ಹೆಚ್ಚಿ ಮಾಡಲಾಗುವುದು;

ಈ) ಹೆಚ್ಚಿಗೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.